**ಓ ಎಸ್ ನಂಃ 454/2021**
**ಪಿ ಡಬ್ಲ್ಯೂ ಃ 1**

**ದಿಃ 05.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎ ಕೆ ವಕೀಲರಿಂದಃ-**

ನಿಪಿ 2 ರ ತಿಳುವಳಿಕೆ ಪತ್ರವನ್ನು ಕಳುಹಿಸಿರುವ ವಿಳಾಸವು ಈ ದಾವೆಯ ವಸ್ತು ವಿಷಯವಾಗಿದೆ ಎಂದರೆ ಸರಿ. ದಾವಾ ಸ್ವತ್ತು ಡ್ಯೂಪ್ಲೆಕ್ಸ್ ಹೌಸ್ ಎಂದರೆ ಸಾಕ್ಷಿ ಈಗ ಇದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಪ್ರತಿವಾದಿಯ ಗಂಡ ಕ್ರಯಕ್ಕೆ ಪಡೆದ ನಂತರ ಸದರಿ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 1ರ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟ ಸಮಯದಲ್ಲಿ ಪ್ರತಿವಾದಿಯ ಗಂಡ ದಾವಾ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಸಿರುವುದು ನನಗೆ ಗೊತ್ತಾಗಿರುತ್ತದೆ. ಪ್ರತಿವಾದಿಯ ಗಂಡ ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರ 2015 ನೇ ಸಾಲಿನಲ್ಲಿ ಮನೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೊಟ್ಟ ಮೊದಲ ಬಾರಿಗೆ ಕ್ರಯದ ಮುಂಗಡ ಹಣ ಶಾಂತಾರಾಮ್ ಭಟ್ ಗೆ ಕೊಡುವುದಕ್ಕಿಂತ ಮುಂಚೆ ಎಷ್ಟು ದಿನಗಳ ಹಿಂದೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ತಮ್ಮ ಮತ್ತು ಶಾಂತಾರಾಮ್ ಭಟ್ ರವರ ನಡುವೆ ಆಗಿತ್ತು ಎಂದರೆ ಸಾಕ್ಷಿಯು 30 ದಿನಗಳ ಹಿಂದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ತಾವೇನಾದರೂ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನೋಡಿದ್ದೀರ ಎಂದರೆ ಸಾಕ್ಷಿಯು ಜೆರಾಕ್ಸ್ ದಾಖಲಾತಿಗಳನ್ನು ಪ್ರತಿವಾದಿಯ ಗಂಡ ನನಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜೆರಾಕ್ಸ್ ದಾಖಲಾತಿಗಳು ಯಾವು ಯಾವುವು ಎಂದರೆ ಸಾಕ್ಷಿಯು ಶಾಂತಾರಾಮ್ ಭಟ್ ರವರಿಗೆ ದಾವಾ ಸ್ವತ್ತು ನೋಂದಣಿ ಆಗಿರುವ ದಾಖಲಾತಿಗಳು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಕ್ರಯ ಪತ್ರವನ್ನು ಹೊರತು ಪಡಿಸಿ ಇತರೆ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. 2015 ರ ನವೆಂಬರ್ ಮಾಹೆಯಲ್ಲಿ ನಾನು ದಾವಾ ಸ್ವತ್ತನ್ನು ನೋಡಿರುತ್ತೇನೆ. ಆ ಸಮಯದಲ್ಲಿ ದಾವಾ ಸ್ವತ್ತಿನಲ್ಲಿ ಮನೆ ಇತ್ತಾ ಅಥವಾ ಖಾಲಿ ಜಾಗ ಇತ್ತಾ ಎಂದರೆ ಸಾಕ್ಷಿಯು ಖಾಲಿ ಜಾಗ ಇತ್ತು ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಪ್ರತಿವಾದಿಯ ಗಂಡ ಮಾರಾಟ ಮಾಡುತ್ತಿದ್ದಾನೆ ಎಂದು ಯಾರು ನಿಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಪ್ರತಿವಾದಿಯ ಗಂಡ ಶಾಂತಾರಾಮ್ ಭಟ್ ರವರು 2015 ನೇ ಸಾಲಿನ ನವೆಂಬರ್ ಮಾಹೆಯಲ್ಲಿ ತಿಳಿಸಿರುತ್ತಾರೆ. ಪ್ರತಿವಾದಿಯ ಗಂಡರವರಿಂದ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾವುದಾದರೂ ದಾಖಲಾತಿಗಳನ್ನು ಪಡೆದುಕೊಂಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಓ ಎಸ್ ನಂಃ 454/2021**
**ಪಿ ಡಬ್ಲ್ಯೂ ಃ 1**

ನಾನು ಏರ್ ಟೆಲ್ ಕಂಪೆನಿಯಲ್ಲಿ ಸೇಲ್ಸ್ ಎಕ್ಸಿಕ್ಯುಟೀವ್ ಕೆಲಸವನ್ನು 2020 ನೇ ಸಾಲಿನಿಂದ ಮಾಡುತ್ತಿದ್ದೇನೆ. 2020 ನೇ ಸಾಲಿಗಿಂತ ಪೂರ್ವದಲ್ಲಿ ನಾನು ವೀಡಿಯೋಕೋನ್ ಕಂಪೆನಿಯಲ್ಲಿ 8 ವರ್ಷಗಳ ಕಾಲ ಕೆಲಸವನ್ನು ಮಾಡಿರುತ್ತೇನೆ. ನಾನು ವೀಡಿಯೋಕೋನ್ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿದಾಗ ನನ್ನ ಮೊದಲ ತಿಂಗಳ ಸಂಬಳ ರೂ. 18,000/-. ವೀಡಿಯೋಕೋನ್ ಕಂಪೆನಿಯಲ್ಲಿ ತಾವು ಕೆಲಸ ಮಾಡಿದ ಕೊನೆಯ ತಿಂಗಳ ಸಂಬಳ ಎಷ್ಟು ಎಂದರೆ ಸಾಕ್ಷಿಯು ರೂ. 24,000/-. ನಾನು ಬ್ಯಾಂಕ್ ನಲ್ಲಿ 2012 ನೇ ಸಾಲಿನಿಂದ ಅಕೌಂಟ್ ಹೊಂದಿರುತ್ತೇನೆ. ದಿಃ 30.12.2015 ರಲ್ಲಿ ತಮ್ಮ ಬ್ಯಾಂಕ್ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದರೆ ನನಗೆ ಈಗ ನೆನಪಿಲ್ಲ. ನಾನು ನನ್ನ ಬ್ಯಾಂಕ್ ಖಾತೆಯನ್ನು ಐಸಿಐಸಿಐ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್ ನಲ್ಲಿ ಹೊಂದಿರುತ್ತೇನೆ. ಅಪೆಕ್ಸ್ ಬ್ಯಾಂಕ್ ನ ಖಾತೆಯನ್ನು ನಾನು 2017-18 ನೇ ಸಾಲಿನಿಂದ ಹೊಂದಿರುತ್ತೇನೆ. ದಿಃ 30.12.2015 ರಿಂದ ದಿಃ 08.04.2021 ರ ತನಕ ತಮ್ಮ ಬ್ಯಾಂಕ್ ಖಾತೆಗಳಲ್ಲಿ ಎಷ್ಟು ಹಣ ಇತ್ತು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ 2 ರ ತಿಳುವಳಿಕೆ ಪತ್ರದ ಎರಡನೇ ಪುಟದ ಎರಡನೇ ಸಾಲಿನಲ್ಲಿ ನಮೂದು ಮಾಡಿರುವ ರೂ. 10,00,000/- ಹಣವನ್ನು ಯಾವ ರೂಪದಲ್ಲಿ ಪಾವತಿ ಮಾಡಿದ್ದೀರಿ ಎಂದರೆ ಸಾಕ್ಷಿ ನಗೆದು ರೂಪದಲ್ಲಿ ಎಂದು ನುಡಿಯುತ್ತಾರೆ. ದಿಃ 10.05.2016 ರಂದು ರೂ. 5,00,000/- ಪ್ರತಿವಾದಿಯ ಗಂಡನಾದ ಶಾಂತಾರಾಮ್ ಭಟ್ ರವರಿಗೆ ನೀಡಿದ್ದೀರಿ ಎಂದು ಹೇಳಿ ಬರೆಸಿದ್ದೀರಿ ಸದರಿ ಹಣವನ್ನು ಅವರಿಗೆ ಯಾವುದರ ಮೂಲಕ ಪಾವತಿ ಮಾಡಿದ್ದೀರಿ ಎಂದರೆ ಸಾಕ್ಷಿ ನಗದು ರೂಪದಲ್ಲಿ ಎಂದು ನುಡಿಯುತ್ತಾರೆ. ಸದರಿ ಹಣವು ಮೇಲ್ಕಂಡ ದಿನಾಂಕಗಳಲ್ಲಿ ತಮ್ಮ ಬಳಿ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ನಗದು ರೂಪದಲ್ಲಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಹಣವನ್ನು ತಾವು ಪ್ರತಿವಾದಿಯ ಗಂಡನಾದ ಶಾಂತಾರಾಮ್ ಭಟ್ ರವರಿಗೆ ನೀಡಿರುವುದಿಲ್ಲ ಆ ಕಾರಣ ಸದರಿ ರವರಿಗೆ ಯಾವುದರ ಮುಖಾಂತರ ಸದರಿ ಹಣವನ್ನು ನೀಡಲಾಗಿದೆ ಎಂಬುದರ ಬಗ್ಗೆ ನಿಪಿ 2 ರ ತಿಳುವಳಿಕೆ ಪತ್ರದಲ್ಲಿ ಒಕ್ಕಣೆ ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ 30.12.2015 ರಿಂದ ದಿಃ 08.04.2021 ರ ನಡುವೆ ತಾವು ಶಾಂತಾರಾಮ್ ಭಟ್ ರವರ ಮನೆಗೆ ತಾವು ಎಷ್ಟು ಬಾರಿ ಹೋಗಿದ್ದೀರಿ ಎಂದರೆ ಸಾಕ್ಷಿ 1 ಬಾರಿ ಹೋಗಿದ್ದೀನಿ ಎಂದು ನುಡಿಯುತ್ತಾರೆ. ಯಾವ ದಿನಾಂಕ,

ತಿಂಗಳು, ವರ್ಷ ತಾವು ಶಾಂತಾರಾಮ್ ಭಟ್ ರವರ ಮನೆಗೆ ಹೋಗಿದ್ದೀರಿ ಎಂದರೆ ಸಾಕ್ಷಿ ಈಗ ನನಗೆ ನೆನಪಿಲ್ಲ. ನಮ್ಮ ತಂದೆಯವರು 2018 ರ ನವೆಂಬರ್ ಮಾಹೆಯಲ್ಲಿ ಮರಣ ಹೊಂದಿರುತ್ತಾರೆ. ದಿಃ 30.12.2015 ರಂದು ತಾವು ಶಾಂತಾರಾಮ್ ಭಟ್ ರವರಿಗೆ ರೂ. 10,00,000/- ಮುಂಗಡ ಹಣವನ್ನು ನೀಡಿದ್ದೀರಿ ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ಅವರಿಂದ ರಶೀದಿಯನ್ನು ಪಡೆದಿದ್ದೀರ ಎಂದರೆ ಸಾಕ್ಷಿ ಅವರು ತಂದೆಯವರ ಸ್ನೇಹಿತರಾದ ಕಾರಣ ಯಾವುದೇ ರಶೀದಿಯನ್ನು ಪಡೆದಿರುವುದಿಲ್ಲ. ಅದೇ ರೀತಿ ದಿಃ 10.05.2016 ರಂದು ತಾವು ಶಾಂತಾರಾಮ್ ಭಟ್ ರವರಿಗೆ ರೂ. 5,00,000/- ಮುಂಗಡ ಹಣವನ್ನು ನೀಡಿದ್ದೀರಿ ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ಅವರಿಂದ ರಶೀದಿಯನ್ನು ಪಡೆದಿದ್ದೀರ ಎಂದರೆ ಸಾಕ್ಷಿ ಅವರು ತಂದೆಯವರ ಸ್ನೇಹಿತರಾದ ಕಾರಣ ಯಾವುದೇ ರಶೀದಿಯನ್ನು ಪಡೆದಿರುವುದಿಲ್ಲ.

ತಮ್ಮ ತಂದೆ ಹಾಗೂ ಪ್ರತಿವಾದಿಯ ಗಂಡನಾದ ಶಾಂತಾರಾಮ್ ಭಟ್ ರವರು ಒಂದೇ ಪ್ರೆಸ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ತಮ್ಮ ತಂದೆ ಹಾಗೂ ಪ್ರತಿವಾದಿಯ ಗಂಡನಾದ ಶಾಂತಾರಾಮ್ ಭಟ್ ರವರಿಗೆ ಪ್ರೆಸ್ ನಲ್ಲಿ ಒಳ್ಳೆಯ ಸಂಬಳವನ್ನು ಪಡೆಯುತ್ತಿದ್ದರು ಎಂದರೆ ಸರಿ. ಶಾಂತಾರಾಮ್ ಭಟ್ ರವರಿಗೆ ಯಾವುದೇ ಸಂತತಿ ಇಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ದಿಃ 30.12.2015 ರ ನಂತರ ತಾವೇನಾದರೂ ಪ್ರತಿವಾದಿಯ ಗಂಡನಿಗೆ ಕ್ರಯ ಪತ್ರದ ಅನ್ವಯ ಕ್ರಯಪತ್ರವನ್ನು ಬರೆದುಕೊಡಿ ಎಂದು ನೋಟಿಸ್ ನ್ನು ಜಾರಿ ಮಾಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತಾವು ಶಾಂತಾರಾಮ್ ಭಟ್ ರವರಿಗೆ ಕ್ರಯದ ಕರಾರು ಬಾಬ್ತು ರೂ. 10,00,000/- ಹಣವನ್ನು ದಿಃ 30.12.2015 ರಂದು ನೀಡಿದ್ದೀರಿ ಎಂದು ಹೇಳಿದ್ದೀರಿ ಆ ಸಮಯದಲ್ಲಿ ಶಾಂತಾರಾಮ್ ಭಟ್ ರವರಿಂದ ಕ್ರಯದ ಕರಾರು ಪತ್ರವನ್ನು ಬರೆಸಿಕೊಳ್ಳಲು ತಮಗೆ ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಯಾವುದೇ ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ದಿಃ 30.12.2015 ರಂದು ರೂ. 10,00,000/- ಮುಂಗಡ ಹಣವನ್ನು ಎಲ್ಲಿ ಮತ್ತು ಎಷ್ಟು ಸಮಯಕ್ಕೆ ನೀಡಿದ್ದೀರಿ ಎಂದರೆ ಸಾಕ್ಷಿಯು ಬೆಂಗಳೂರಿನ ಜಯನಗರದ ಕಾಂಪ್ಲೆಕ್ಸ್ ನಲ್ಲಿ ಬೆಳಿಗ್ಗೆ 11.00 ಗಂಟೆಗೆ ನೀಡಿರುತ್ತೇನೆ. ಆ ಸಮಯದಲ್ಲಿ ನಮ್ಮ ತಂದೆಯವರು ಹಾಜರಿದ್ದರು. ದಿಃ 30.12.2015 ರಂದು ತಾವು ಶಾಂತಾರಾಮ್ ಭಟ್ ರವರನ್ನು ಭೇಟಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು

**ಓ ಎಸ್ ನಂಃ 454/2021**
**ಪಿ ಡಬ್ಲ್ಯೂ ಃ 1**

ದಾಖಲಾತಿಯನ್ನು ತೋರಿಸಲಾಗಿದ್ದು ಅದು ದಿಃ 30.12.2015 ರ ಒಂದು ನೋಂದಾಯಿತ ಕ್ರಯ ಪತ್ರದ ದೃಢೀಕೃತ ನಕಲಾಗಿದ್ದು ಸದರಿ ದಾಖಲಾತಿಯನ್ನು ಸಾಕ್ಷಿ ನೋಡಿದ್ದು, ಸಾಕ್ಷಿಯ ಒಪ್ಪಿಗೆಯ ಮೇರೆಗೆ **ನಿಡಿ 1** ಎಂದು ಗುರುತಿಸಲಾಯಿತು. ದಾವಾ ಸ್ವತ್ತನ್ನು ಶಾಂತಾರಾಮ್ ಭಟ್ ರವರು ದಿಃ 30.12.2015 ರಂದು ಒಂದು ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದಾರೆ ಎಂದರೆ ಸರಿ. ದಿಃ 30.12.2015 ರಂದು ಶಾಂತಾರಾಮ್ ಭಟ್ ರವರು ತಮ್ಮಿಂದ ಹಣವನ್ನು ಪಡೆದುಕೊಳ್ಳಲು ಯಾವುದೆ ಸಕಾರಣ ಇರುವುದಿಲ್ಲ ಹಾಗೂ ತಮ್ಮಿಂದ ಯಾವುದೇ ಹಣವನ್ನು ಅವರು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**